ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು
ADIKAVI SRI MAHARSHI VALMIKI UNIVERSITY, RAICHUR
Krishna Tunga Campus, Mantralay Road (N.H. 167), Yergera -584133, Raichur, Karnataka
ಶೈಕ್ಷಣಿಕ ವಿಭಾಗ Website: https://raichuruniversity.ac.in

ಸಂ.ಆಶ್ರೀಮವಾವಿರಾ/ಶೈಕ್ಷಣಿಕ ವಿಭಾಗ/ಯುಜಿ/2025-26/2409 ದಿನಾಂಕ: 16.12.2025

## ಸುತ್ತೋಲೆ

ವಿಷಯ: 2025-26ನೇ ಶೈಕ್ಷಣಿಕ ಸಾಲಿನ ಸ್ನಾತಕ ಪದವಿಯ ನಾಲ್ಕನೇ, ಐದನೇ ಹಾಗೂ ಆರನೇ ಸೆಮಿಸ್ಟರ್‌ಗೆ ಬಿ.ಎ/ಬಿಎಸ್ಸಿ/ಬಿಎಸ್‌ಡಬ್ಲು ಕೋರ್ಸ್‌ಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳು ಕೌಶಲ್ಯ(Skill) ಹಾಗೂ ಐದನೇ ಮತ್ತು ಆರನೇ ಸೆಮಿಸ್ಟರ್‌ನಲ್ಲಿ ಐಚ್ಛಿಕ(Elective) ವಿಷಯವನ್ನು ಆಯ್ಕೆ ಮಾಡಿಕೊಳ್ಳುವ ವಿಧಾನದ ಕುರಿತು.

ಉಲ್ಲೇಖ: 1. Guidelines for UG Syllabus Structure from the Academic Year-2024-25
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 16.12.2025

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದ ಅಡಿಯಲ್ಲಿ ಬರುವ ಎಲ್ಲಾ ಸಂಯೋಜಿತ ಸ್ನಾತಕ ಮಹಾವಿದ್ಯಾಲಯಗಳ ಪ್ರಾಂಶುಪಾಲರುಗಳ ಗಮನಕ್ಕೆ ತರಬಯಸುವುದೇನೆಂದರೆ, 2025–26ನೇ ಶೈಕ್ಷಣಿಕ ಸಾಲಿನ ಸ್ನಾತಕ ಪದವಿಯ ಬಿ.ಎ/ಬಿಎಸ್ಸಿ/ಬಿಎಸ್‌ಡಬ್ಲು ಕೋರ್ಸ್‌ಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳು ಈ ಕೆಳಗೆ ನೀಡಿರುವಂತೆ ಕೌಶಲ್ಯ(Skill) ವಿಷಯವನ್ನು ಆಯ್ಕೆ ಮಾಡಿಕೊಳ್ಳುವ ವಿಧಾನವನ್ನು ಅನುಸರಿಸಬೇಕಾಗಿ ಸೂಚಿಸಲಾಗಿದೆ.

- ನಾಲ್ಕನೇ ಸೆಮಿಸ್ಟರ್‌ನಲ್ಲಿ ಕೌಶಲ್ಯ(Skill) ವಿಷಯವಾಗಿ ಮೂರು Major ವಿಷಯಗಳಲ್ಲಿ ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳತಕ್ಕದ್ದು.
- ಐದನೇ ಸೆಮಿಸ್ಟರ್‌ನಲ್ಲಿ ಕೌಶಲ್ಯ(Skill) ವಿಷಯವನ್ನು ಆಯ್ಕೆ ಮಾಡುವುದರಲ್ಲಿ ನಾಲ್ಕನೇ ಸೆಮಿಸ್ಟರ್‌ನಲ್ಲಿ ಕೌಶಲ್ಯ(Skill) ವಿಷಯವಾಗಿ ಆಯ್ಕೆ ಮಾಡಿದಂತಹ ವಿಷಯವನ್ನು ಹೊರತುಪಡಿಸಿ ಇನ್ನೂ ಉಳಿದ ಎರಡು Major ವಿಷಯಗಳಲ್ಲಿ ಯಾವುದಾದರೂ ಒಂದು ವಿಷಯವನ್ನು ಐದನೇ ಸೆಮಿಸ್ಟರ್‌ನಲ್ಲಿ ಕೌಶಲ್ಯ(Skill) ವಿಷಯವನ್ನಾಗಿ ಆಯ್ಕೆ ಮಾಡಿಕೊಳ್ಳತಕ್ಕದ್ದು.
- ಆರನೇ ಸೆಮಿಸ್ಟರ್‌ನಲ್ಲಿ ಕೌಶಲ್ಯ(Skill) ವಿಷಯವನ್ನು ಆಯ್ಕೆ ಮಾಡುವುದರಲ್ಲಿ ನಾಲ್ಕನೇ ಹಾಗೂ ಐದನೇ ಸೆಮಿಸ್ಟರ್‌ನಲ್ಲಿ ಆಯ್ಕೆ ಮಾಡಿದಂತಹ ಕೌಶಲ್ಯ(Skill) ವಿಷಯಗಳನ್ನು ಹೊರತುಪಡಿಸಿ ಇನ್ನೂ ಉಳಿದ ಒಂದು Major ವಿಷಯವನ್ನು ಆಯ್ಕೆ ಮಾಡಿಕೊಳ್ಳತಕ್ಕದ್ದು.
- SEP ಶೈಕ್ಷಣಿಕ ನಿಯಮಾವಳಿಗಳ(Annexure-9 & 10) ಪ್ರಕಾರ ಐದನೇ ಹಾಗೂ ಆರನೇ ಸೆಮಿಸ್ಟರಗಳಲ್ಲಿ ಐಚ್ಛಿಕ(Elective) ವಿಷಯವನ್ನು ಆಯ್ಕೆ ಮಾಡಬೇಕಾಗುತ್ತದೆ. ಈ ಐಚ್ಛಿಕ(Elective) ವಿಷಯವು ಮೂರು Major ವಿಷಯಗಳನ್ನು ಹೊರತುಪಡಿಸಿ ಇನ್ನೂ ಉಳಿದ Major ವಿಷಯಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳತಕ್ಕದ್ದು. ಒಮ್ಮೆ ಆಯ್ಕೆಯಾದ ವಿಷಯವು ಐದನೇ ಹಾಗೂ ಆರನೇ ಸೆಮಿಸ್ಟರ್‌ಗಳಿಗೆ ಅನ್ವಯಿಸುತ್ತದೆ. ಯಾವುದೇ ಕಾರಣಕ್ಕೂ ಐಚ್ಛಿಕ(Elective) ವಿಷಯದ ಬದಲಾವಣೆಗೆ ಅವಕಾಶವಿರುವುದಿಲ್ಲ.

16/12

ಕುಲಸಚಿವರು
ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು

ಕುಲಸಚಿವರು
ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ
ರಾಯಚೂರು

**ಇವರಿಗೆ,**

ಎಲ್ಲಾ ಸಂಯೋಜಿತ ಸ್ನಾತಕ (UG) ಪದವಿ ಮಹಾವಿದ್ಯಾಲಯಗಳ ಪ್ರಾಂಶುಪಾಲರುಗಳು, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ ರಾಯಚೂರು. ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.

**ಪ್ರತಿ:**

1. ಕುಲಸಚಿವರು (ಮೌಲ್ಯಮಾಪನ), ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
2. ಹಣಕಾಸು ಅಧಿಕಾರಿಗಳು, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
3. ಉಪಕುಲಸಚಿವರು, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
4. ವಿಶೇಷಾಧಿಕಾರಿಗಳು, ಶೈಕ್ಷಣಿಕ ವಿಭಾಗ, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು
5. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
6. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು/ಕುಲಸಚಿವರ ಆಪ್ತ ಸಹಾಯಕರು, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
7. ಜಾಲತಾಣ ವಿಭಾಗ, ಸದರಿ ಸುತ್ತೋಲೆಯನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಅಳವಡಿಸಲು.
8. ಕಛೇರಿ ಪ್ರತಿ.